# ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ:** ಶ್ರೀಮತಿ ಸಾಬವ್ವ ಎಸ್.ತಳವಾರ, ಅಧ್ಯಕ್ಷರು, ಹಂದಿಗನೂರ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ವಿಜಯಪುರ ಇವರ ಪತ್ರ ಸಂಖ್ಯೆ: ಜಿಪಂಆ/ಗ್ರಾಪಂ/ಸಿಬ್ಬಂದಿ/ಸಿಆರ್-01/2017-18/2626, ದಿನಾಂಕ 19.04.2017
2) ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್, ದಿನಾಂಕ 17.05.2017
3) ಶ್ರೀಮತಿ ಸಾಬವ್ವ ಎಸ್.ತಳವಾರ, ಅಧ್ಯಕ್ಷರು, ಹಂದಿಗನೂರ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಮತ್ತು ಜಿಲ್ಲೆ ಕಾರಣ ಕೇಳಿ ನೋಟೀಸಿಗೆ ಸಲ್ಲಿಸಿರುವ ಉತ್ತರ, ದಿನಾಂಕ 19.06.2017
4) ಇದೇ ಸಮಸಂಖ್ಯೆಯ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ, ದಿನಾಂಕ 06.07.2017

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ರಾ.ಗಾಂ.ಗ್ರಾ.ವ.ನಿಗಮ ಇವರು 2015-16 ನೇ ಸಾಲಿನ ಇಂದಿರಾ ಆವಾಜ್ ಯೋಜನೆಯಡಿ ಹಂದಿಗನೂರ ಗ್ರಾಮ ಪಂಚಾಯತಿಯಲ್ಲಿ ಎಸಗಿರುವ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಶಿಸ್ತು ಕ್ರಮ ಜರುಗಿಸಿ ವರದಿ ಸಲ್ಲಿಸುವಂತೆ ಸೂಚಿಸಿದ ಹಿನ್ನೆಲೆಯಲ್ಲಿ, ಪ್ರಕರಣದ ಕುರಿತು ತನಿಖೆ ನಡೆಸಲಾಗಿದ್ದು, ಪ್ರಕರಣದಲ್ಲಿ ಭಾಗಿಯಾದ ಶ್ರೀ ಜಿ.ಎಂ.ಮ್ಯಾಗೇರಿ, ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಇವರನ್ನು ಅಮಾನತ್ತುಗೊಳಿಸಲಾಗಿರುತ್ತದೆ. ಮುಂದುವರೆದು ಹಂದಿಗನೂರ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ಶ್ರೀಮತಿ ಸಾಬವ್ವ ಎಸ್.ತಳವಾರ ಇವರ ವಿರುದ್ಧ ಕ.ಗ್ರಾ.ಸ್ವ ಮತ್ತು ಪಂ.ರಾಜ್ ಅಧಿನಿಯಮದ ಪ್ರಕರಣ 43(ಎ) ಮತ್ತು 48(4) ರಡಿ ಕ್ರಮ ಜರುಗಿಸಿ, ಸದರಿಯವರ ಸದಸ್ಯತ್ವ ಮತ್ತು ಅಧ್ಯಕ್ಷ ಸ್ಥಾನದಿಂದ ತೆಗೆದು ಹಾಕಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ವಿಜಯಪುರ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ತನಿಖಾ ವರದಿಯಲ್ಲಿ ಕೆಳಕಂಡ ಅವ್ಯವಹಾರಗಳನ್ನು ಎಸಗಿರುವುದಾಗಿ ತಿಳಿಸಿರುತ್ತಾರೆ.

1) 2015-16 ನೇ ಸಾಲಿನ ಇಂದಿರಾ ಆವಾಜ್ ವಸತಿ ಯೋಜನೆಯಡಿ 28 ಫಲಾನುಭವಿಗಳ ಮನೆಗಳಿಗೆ ಬೇರೆ ಮನೆಯ ಛಾಯಾಚಿತ್ರ ಜಿಪಿಎಸ್ ಮಾಡಿ, ಒಟ್ಟು ರೂ. 19,37,000/- ಗಳನ್ನು ಸಂದಾಯ ಮಾಡಿ ಸಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುತ್ತಾರೆ.
2) 23 ಫಲಾನುಭವಿಗಳು ಇತರೆ ಜಾತಿ /ವರ್ಗಕ್ಕೆ ಸೇರಿದವರಾಗಿದ್ದರೂ ಸಹ ಸದರಿ 23 ಫಲಾನುಭವಿಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದವರೆಂದು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಿ 23 ಫಲಾನುಭವಿಗಳಿಗೂ ರೂ.16,28,000/- ಗಳನ್ನು ಸಂದಾಯ ಮಾಡಿ ಸರ್ಕಾರಕ್ಕೆ ಆರ್ಥಿಕ ನಷ್ಟವನ್ನು ಉಂಟು ಮಾಡಿರುತ್ತಾರೆ.
3) 03 ಜನ ಫಲಾನುಭವಿಗಳು ಹಂದಿಗನೂರ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುತ್ತಿಲ್ಲ. ಆದಾಗ್ಯೂ 03 ಜನ ಫಲಾನುಭವಿಗಳು ಹಂದಿಗನೂರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುತ್ತಿದ್ದಾರೆ. ಅಂತಾ ರೂ.1,48,000/- ಗಳನ್ನು ಸಂದಾಯ ಮಾಡಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುತ್ತಾರೆ.
4) ಇದಲ್ಲದೇ 2016-17 ನೇ ಸಾಲಿನ ಪ್ರಧಾನ ಮಂತ್ರಿ ಆವಾಜ್ ಯೋಜನೆಯಡಿ 28 ಜನರು ಎಸ್.ಇ.ಸಿ.ಸಿ. ಪಟ್ಟಿಯಲ್ಲಿ ಇಲ್ಲದಿದ್ದರೂ ಸದರಿ 28 ಜನರಿಗೆ ಆಯ್ಕೆ ಮಾಡಿ ಗಂಭೀರ ಸ್ವರೂಪದ ಅವ್ಯವಹಾರ ನಡೆಸಿರುವುದು ಕಾರ್ಯನಿರ್ವಾಹಕ ಅಧಿಕಾರಿಗಳ ವರದಿಯಿಂದ ಕಂಡುಬರುವುದಾಗಿ ತಿಳಿಸಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸಿ, ಗ್ರಾಮ ಪಂಚಾಯತಿ ಸದಸ್ಯ ಮತ್ತು ಅಧ್ಯಕ್ಷ ಸ್ಥಾನದಿಂದ ಏಕೆ ತೆಗೆದು ಹಾಕಬಾರದು ಎಂಬುದರ ಬಗ್ಗೆ 15 ದಿನಗಳೊಳಗಾಗಿ ವಿವರಣೆ ನೀಡುವಂತೆ ಶ್ರೀಮತಿ ಸಾಬವ್ವ ಎಸ್.ತಳವಾರ, ಅಧ್ಯಕ್ಷರು, ಹಂದಿಗನೂರ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ (3) ರಲ್ಲಿ ಆರೋಪಿತ ಗ್ರಾಮ ಪಂಚಾಯತಿ ಅಧ್ಯಕ್ಷರು ಸರ್ಕಾರದಿಂದ ಜಾರಿಗೊಳಿಸಲಾಗಿದ್ದ ಕಾರಣ ಕೇಳಿ ನೋಟಿಸಿಗೆ ಕೆಳಗಿನಂತೆ ಉತ್ತರವನ್ನು ಸಲ್ಲಿಸಿರುತ್ತಾರೆ.

1) 2015-16 ನೇ ಸಾಲಿನ ಇಂದಿರಾ ಆವಸ ಯೋಜನೆ ಅಡಿಯಲ್ಲಿ ಒಂದೇ ಫಲಾನುಭವಿ ಮನೆಯ ಜಿಪಿಎಸ್ ಅಳವಡಿಸಿ ಅನುದಾನ ದುರುಪಯೋಗಪಡಿಸಿಕೊಂಡ ಪ್ರಕರಣದಲ್ಲಿ, ಈ ಕಾರ್ಯವು ಗ್ರಾಮ ಪಂಚಾಯತಿ ಅಧ್ಯಕ್ಷರ ವ್ಯಾಪ್ತಿಗೆ ಬರದೆ ಇರುವುದರಿಂದ, ತಾನು ಫಲಾನುಭವಿಗೆ ಹಣವನ್ನು ನೀಡುವಾಗ ಯಾವುದೇ ಸಹಿ ಮತ್ತು ಇನ್ನಿತರೆ ಯಾವುದೇ ಅಧಿಕಾರ ಹೊಂದಿರುವುದಿಲ್ಲ. ಜಿಪಿಎಸ್ ಮಾಡುವುದು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ನೋಡಲ್ ಅಧಿಕಾರಿಗೆ ಸಂಬಂಧಪಟ್ಟಿದ್ದಾಗಿದ್ದು, ನನ್ನ ಕಾರ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.
2) 23 ಫಲಾನುಭವಿಗಳು ಇತರೆ ವರ್ಗಕ್ಕೆ ಸೇರಿದವರಾಗಿದ್ದರೂ, ಪರಿಶಿಷ್ಟ ಜಾತಿ/ವರ್ಗಕ್ಕೆ ಸೇರಿದವರೆಂದು ರೂ.16,28,000/- ಗಳನ್ನು ಸಂದಾಯ ಮಾಡಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿದ ಪ್ರಕರಣದಲ್ಲಿ, ಗ್ರಾಮ ಪಂಚಾಯತಿ ವ್ಯಾಪ್ತಿಯ ಬಸ್ತಿನಾಳ, ಹಂದಿಗನೂರ ಹಾಗೂ ಹಂದಿಗನೂರ ತಾಂಡಾ ಗ್ರಾಮಗಳಲ್ಲಿ ಒಟ್ಟು 12000 ಜನಸಂಖ್ಯೆ ಹೊಂದಿದ್ದು, ಗ್ರಾಮ ಸಭೆಯ ಉಸ್ತುವಾರಿಯನ್ನು ಆಡಳಿತ ಉಸ್ತುವಾರಿ ಆಡಳಿತ ವರ್ಗದವರಿಗೆ ಇರುತ್ತದೆ. ರೋಸ್ಟರ್ ಅನುಸಾರ ಫಲಾನುಭವಿ ಆಯ್ಕೆ ಅಧಿಕಾರ ನೋಡಲ್ ಅಧಿಕಾರಿ ಮತ್ತು ಪಂ.ಅ.ಅ.ಗೆ ಇರುತ್ತದೆ. ದಾಖಲಾತಿ ಪರಿಶೀಲನೆ ಹಾಗೂ ಇತರೆ ಸಂಪೂರ್ಣ ಅಧಿಕಾರ ಪಂ.ಅ.ಅ. ಯದ್ದಾಗಿದ್ದು, ನನ್ನ ಹಸ್ತಕ್ಷೇಪ ಇರುವುದಿಲ್ಲವೆಂದು ತಿಳಿಸಿರುತ್ತಾರೆ.
3) 3 ಫಲಾನುಭವಿಗಳು ಹಂದಿಗನೂರ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವುದಿಲ್ಲ. ಆದರೂ ಸಹ ರೂ.1,48,000/- ಗಳನ್ನು ಸಂದಾಯ ಮಾಡಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿದ ಪ್ರಕರಣದಲ್ಲಿ, ಸದರಿ 3 ಜನ ಫಲಾನುಭವಿಗಳು ಹಂದಿಗನೂರ ಗ್ರಾಮದ ರಹವಾಸಿಗಳಾಗಿದ್ದು, ಚುನಾವಣಾ ಗುರುತಿನ ಚೀಟಿ ಹೊಂದಿರುತ್ತಾರೆ.ಈ ಆಪಾದನೆ ಸುಳ್ಳಿನಿಂದ ಕೂಡಿರುತ್ತದೆ ಎಂದು ತಿಳಿಸಿರುತ್ತಾರೆ. ಚುನಾವಣಾ ಗುರುತಿನ ಚೀಟಿಯ ಪ್ರತಿಗಳನ್ನು ಸಲ್ಲಿಸಿರುತ್ತಾರೆ.
4) 2016-17 ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಆವಾಜ ಯೋಜನೆಯಡಿಯಲ್ಲಿ 28 ಜನ ಫಲಾನುಭವಿಗಳನ್ನು ಎಸ್.ಐ.ಸಿ.ಸಿ. ಪಟ್ಟಿಯಲ್ಲಿ ಇಲ್ಲದಿದ್ದರೂ ಆಯ್ಕೆ ಮಾಡಿರುವ ಆಪಾದನೆಯಲ್ಲಿ ತನ್ನದು ಯಾವುದೇ ಪಾತ್ರ ಇರುವುದಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ಈ ಮನೆಗಳೂ ಮಂಜೂರಾತಿಯೂ ಆಗಿರುವುದಿಲ್ಲ.

ಈ ಪ್ರಕರಣಗಳಲ್ಲಿ ಅಧ್ಯಕ್ಷರದು ಯಾವುದೇ ರೀತಿಯ ಅಧಿಕಾರ ಇರುವುದಿಲ್ಲ ಹಾಗೂ ಅಧಿಕಾರ ದುರುಪಯೋಗಪಡಿಸಿಕೊಂಡಿರುವುದಿಲ್ಲ, ಆದ್ದರಿಂದ, ಸದಸ್ಯತ್ವದಿಂದ ತೆಗೆದುಹಾಕುವ ಪ್ರಕ್ರಿಯೆಯನ್ನು ಕೈಬಿಡಲು ಹಾಗೂ ಆಪಾದನೆಯಿಂದ ಮುಕ್ತಗೊಳಿಸಲು ಕೋರಿರುತ್ತಾರೆ.

ಮೇಲೆ ಓದಲಾದ (4) ರನ್ವಯ, ಶ್ರೀಮತಿ ಸಾಬವ್ವ ಎಸ್.ತಳವಾರ, ಅಧ್ಯಕ್ಷರು, ಹಂದಿಗನೂರ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)ಯವರ ನ್ಯಾಯಾಲಯದಲ್ಲಿ ದಿನಾಂಕ 24.07.2017 ರಂದು ವಿಚಾರಣೆ ಜರುಗಿಸಲಾಗಿದೆ. ಹಾಗೂ ಪ್ರಕರಣದ ಕುರಿತು ದಿನಾಂಕ 29.05.2017 ರಂದು ಪುನ: ವಿಚಾರಣೆ ನಡೆಸಲಾಗಿ, ಕಾರ್ಯನಿರ್ವಾಹಕ ಅಧಿಕಾರಿ, ಸಿಂಧಗಿ ತಾಲ್ಲೂಕು ಪಂಚಾಯತಿ, ವಿಜಯೊಉರ ಜಿಲ್ಲೆ ಇವರಿಂದ ಪ್ರಕರಣದ ಬಗ್ಗೆ ಮಾಹಿತಿ ಪಡೆಯಲಾಗಿ, ಸದರಿ ವಸತಿ ಯೋಜನೆಗಳಡಿ ಜಿಪಿಎಸ್ ಮಾಡುವುದು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕರ್ತವ್ಯವಾಗಿದೆ ಹಾಗೂ ಇತರೆ ಜಾತಿ /ವರ್ಗಕ್ಕೆ ಸೇರಿದ 23 ಫಲಾನುಭವಿಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದವರೆಂದು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಿರುವುದು, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿಲ್ಲದ 3 ಜನರನ್ನು ಫಲಾನುಭವಿಗಳನ್ನಾಗಿ ಆಯ್ಕೆ ಮಾಡಿರುವುದು ಹಾಗೂ ಎಸ್.ಇ.ಸಿ.ಸಿ. ಪಟ್ಟಿಯಲ್ಲಿಲ್ಲದವರನ್ನು ಫಲಾನುಭವಿಗಳನ್ನಾಗಿ ಆಯ್ಕೆ ಮಾಡಿರುವುದು ಗ್ರಾಮ ಪಂಚಾಯತಿ ಅಧ್ಯಕ್ಷರ ದುರ್ನಡತೆಗೆ ಕಾರಣವಾಗಿದೆ ಹಾಗೂ ಸದರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಅಧ್ಯಕ್ಷರಾದ ಶ್ರೀಮತಿ ಸಾಬವ್ವ ಎಸ್.ತಳವಾರ ಇವರ ವಿರುದಪೀ ಪ್ರಕರಣದ ಸಂಬಂಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ ಎಂದು ತಿಳಿಸಿ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

ಸರ್ಕಾರವು ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಆಪಾದಿತರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿ, ಸದರಿಯವರು 2015-16 ನೇ ಸಾಲಿನ ಹಂದಿಗನೂರ ಗ್ರಾಮ ಪಂಚಾಯತಿಯ ವಸತಿ ಯೋಜನೆಗಳಡಿ ಎಸಗಿರುವ ಅವ್ಯವಹಾರಗಳಿಗೆ ಸಂಬಂಧಿಸಿದಂತೆ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣದ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸಿ, ಹಂದಿಗನೂರ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಸಾಬವ್ವ ಎಸ್.ತಳವಾರ ಇವರನ್ನು ಸದರಿ ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಸದಸ್ಯ ಸ್ಥಾನದಿಂದ ತೆಗೆದು ಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 542 ಗ್ರಾಪಂಅ 2017 ಬೆಂಗಳೂರು, ದಿನಾಂಕ: 21.08.2017**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಸಾಬವ್ವ ಎಸ್.ತಳವಾರ, ಅಧ್ಯಕ್ಷರು, ಹಂದಿಗನೂರ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರು ಹಂದಿಗನೂರ ಗ್ರಾಮ ಪಂಚಾಯತಿಯ 2015-16 ನೇ ಸಾಲಿನ ವಸತಿ ಯೋಜನೆಗಳಡಿ, ಇತರೆ ಜಾತಿ /ವರ್ಗಕ್ಕೆ ಸೇರಿದ 23 ಫಲಾನುಭವಿಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದವರೆಂದು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಿರುವುದು, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿಲ್ಲದ ಮೂರು ಜನರನ್ನು ಫಲಾನುಭವಿಗಳನ್ನಾಗಿ ಆಯ್ಕೆ ಮಾಡಿರುವುದು ಹಾಗೂ ಎಸ್.ಇ.ಸಿ.ಸಿ. ಪಟ್ಟಿಯಲ್ಲಿಲ್ಲದವರನ್ನು ಫಲಾನುಭವಿಗಳನ್ನಾಗಿ ಆಯ್ಕೆ ಮಾಡಿ ದುರ್ನಡತೆ ಎಸಗಿರುವ ಹಿನ್ನೆಲೆಯಲ್ಲಿ, ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸಿ, ಶ್ರೀಮತಿ ಸಾಬವ್ವ ಎಸ್.ತಳವಾರ, ಅಧ್ಯಕ್ಷರು, ಹಂದಿಗನೂರ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರನ್ನು ವಿಜಯಪುರ ಜಿಲ್ಲೆ ಸಿಂಧಗಿ ತಾಲ್ಲೂಕಿನ ಹಂದಿಗನೂರ ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಸದಸ್ಯ ಸ್ಥಾನದಿಂದ ತೆಗೆದು ಹಾಕಿ ಆದೇಶಿಸಿದೆ.

*(ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್),*
*ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ರವರಿಂದ ಅನುಮೋದಿತ)*

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ.ವಿ.ಅರುಣ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿ:**

1. ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ವಿಜಯಪುರ ಜಿಲ್ಲಾ ಪಂಚಾಯತಿ, ವಿಜಯಪುರ.
3. ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ತಾಲ್ಲೂಕು ಪಂಚಾಯತಿ, ಬೆಳಗಾವಿ. (ಸದರಿಯವರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸ್ವೀಕೃತಿಯನ್ನು ಸರ್ಕಾರಕ್ಕೆ ಕಳುಹಿಸಲು ತಿಳಿಸಿದೆ)
4. ಶ್ರೀಮತಿ ಸಾಬವ್ವ ಎಸ್.ತಳವಾರ, ಅಧ್ಯಕ್ಷರು, ಹಂದಿಗನೂರ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ.
5. ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಂದಿಗನೂರ ಗ್ರಾಮ ಪಂಚಾಯತಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ.
6. ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಹೆಚ್ಚುವರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ನಿರ್ದೇಶಕರು(ಪಂ.ರಾಜ್-1), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.